**Ref**: 29/2021 ಎಂ. ಡಬ್ಲ್ಯೂ-1

**<u>ದಿನಾಂಕ 06.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀಸವಾಲುಃ 1 ನೇ ಪಕ್ಷಗಾರರ ಪರ ಅವರ ಅಧಿಕೃತ ಪ್ರತಿನಿಧಿಯಾದ ಶ್ರೀ.ಎಲ್.ಎಂ.ಪಿ. ರವರಿಂದ:**

2016 ನೇ ಸಾಲಿನಲ್ಲಿ 1 ನೇ ಪಕ್ಷಗಾರ ಕಾರ್ಮಿಕರು ತಮ್ಮ ಸಂಘವನ್ನು ರಚಿಸಿಕೊಂಡು ಅದರ ಮಾಹಿತಿಯನ್ನು ಆಡಳಿತ ಮಂಡಳಿಗೆ ಅಂಚೆ ಮೂಲಕ ಕಳುಹಿಸಿದ್ದರು ಎನ್ನುವುದು ನನಗೆ ನೆನಪಿಲ್ಲ. 2 ನೇ ಪಕ್ಷಗಾರರ ಸಂಸ್ಥೆಯ ಕೆಲವೊಂದು ಕಾರ್ಮಿಕರು 1 ನೇ ಪಕ್ಷಗಾರ ಯೂನಿಯನ್ ನಲ್ಲಿ ಸದಸ್ಯರಾಗಿದ್ದರು ಎಂದು ನನಗೆ ನಂತರದಲ್ಲಿ ತಿಳಿದಿತ್ತು. ಆದರೇ ಎಷ್ಟು ಜನ ಕಾರ್ಮಿಕರು ಸದಸ್ಯರಾಗಿದ್ದರು ಎಂದು ನನಗೆ ಗೊತ್ತಿಲ್ಲ. 2017 ನೇ ಸಾಲಿನಲ್ಲಿ ಸಂಸ್ಥೆಯ 5 ಜನ ಕಾರ್ಮಿಕರು ಸದರಿ ಯೂನಿಯನ್ ನ ಸದಸ್ಯರಾದ ಕಾರಣಕ್ಕೆ ರಕ್ಷಿತ ಕಾರ್ಮಿಕರೆಂದು ಘೋಷಣೆ ಕೋರಿ ಕಾರ್ಮಿಕ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿದ್ದರು ಎನ್ನುವುದು ನಿಜ. ಸದರಿ ಅರ್ಜಿಯ ವಿಚಾರಣೆಯಲ್ಲಿ ಸಂಘದ ಸದಸ್ಯರ ಪಟ್ಟಿಯನ್ನು ಕೊಡಲು ಕೇಳಿಕೊಂಡಿದ್ದೇವು ಎನ್ನುವುದು ನನಗೆ ನೆನಪಿಲ್ಲ. ಅದರಂತೆ ಸಂಘದ ಸದಸ್ಯರ ಪಟ್ಟಿಯನ್ನು ಕಾರ್ಮಿಕರು ಕೊಟ್ಟಿದ್ದರು ಎನ್ನುವುದು ನನಗೆ ನೆನಪಿಲ್ಲ. ಸದರಿ ಸದಸ್ಯರ ಪಟ್ಟಿಯಲ್ಲಿಯ ಕೆಲವೊಂದು ಸದಸ್ಯರು ಸೂಪ್ರವೈಸರ್ ಆಗಿದ್ದಾರೆ ಎಂದು ಮತ್ತು ಬೇರೆ ಸಂಘದ ಸದಸ್ಯರಾಗಿದ್ದಾರೆ ಎಂದು ನಾವು ತಕರಾರು ಸಲ್ಲಿಸಿದ್ದೇವು ಎನ್ನುವುದು ಸರಿಯಲ್ಲ. ಆದರೇ ಸದರಿ ಪಟ್ಟಿಯಲ್ಲಿ ವ್ಯತ್ಯಾಸಗಳು ಇದೆ ಎಂದು ತಕರಾರು ಸಲ್ಲಿಸಿದ್ದೇವು. ಸದರಿ ತಕರಾರು ಸಲ್ಲಿಸಿದ ಆಧಾರದಲ್ಲಿ ನನಗೆ ಈಗ ಕಾರ್ಮಿಕರು ಸದಸ್ಯರ ಪಟ್ಟಿಯನ್ನು ಕೊಟ್ಟಿದ್ದರು ಎಂದು ಗೊತ್ತಾಗುತ್ತದೆ. ಸದರಿ ಅರ್ಜಿಯ ವಿಚಾರಣೆಯ ಸಮಯದಲ್ಲಿ ದಿಃ14.07.2017 ರಲ್ಲಿ ಸಲ್ಲಿಸಿದ ತಕರಾರಿನಲ್ಲಿ Works committee and Grievance Committee ಕುರಿತು ನಮೂದಿಸಿರಲಿಲ್ಲ ಎನ್ನುವುದು ನಿಜ. ಸಾಕ್ಷಿ

ಹೇಳುತ್ತಾರೆ. ಸದರಿ ವಿಚಾರಣೆಯಲ್ಲಿ ಸದರಿ committee ಗಳ ಕುರಿತು ವಸ್ತು ವಿಷಯ ಇಲ್ಲದೇ ಇದಿದ್ದರಿಂದ ನಮೂದಿಸಿರುವುದಿಲ್ಲ. ಕಾರ್ಮಿಕರ ಮತ್ತು ಸಂಸ್ಥೆಯ ನಡುವೆ ಇದ್ದ ಬೇರೆ ಪ್ರಕರಣಗಳಲ್ಲಿಯೂ ಕಾರ್ಮಿಕ ಇಲಾಖೆಯಲ್ಲಿ ಸದರಿ Committee ಗಳ ಕುರಿತು ತಿಳಿಸಲಾಗಿದೆಯೋ ಅಥವಾ ಇಲ್ಲವೋ ಎಂದು ನೆನಪಿಲ್ಲ. ಸದರಿ ಸಂಘದಲ್ಲಿಯ ಸದಸ್ಯರುಗಳ ಕುರಿತು ಗೊತ್ತಾದ ನಂತರ ಅವರ ವಿರುದ್ಧ ನಾವು ಕ್ರಮ ಜರುಗಿಸಲು ಪ್ರಾರಂಭಿಸಿದೆವು ಎನ್ನುವುದು ಸುಳ್ಳು. ಸಂಘವನ್ನು ಬಿಟ್ಟು ಬರುವಂತೆ ಬೇದರಿಕೆಯನ್ನು ಹಾಕುತ್ತಿದ್ದೇವು ಎನ್ನುವುದು ಮತ್ತು ಬೇರೆ ಸ್ಥಳಗಳಿಗೆ ವರ್ಗಾವಣೆ ಮಾಡುತ್ತೇವೆ ಎಂದು ಒತ್ತಡ ಹಾಕುತ್ತಿದ್ದೇವು ಎನ್ನುವುದು ಸರಿಯಲ್ಲ.

1 ನೇ ಪಕ್ಷಗಾರ ಸಂಘವು ಪ್ರಾರಂಭ ಆದ ನಂತರದಲ್ಲಿ 2017 ನೇ ಸಾಲಿನಲ್ಲಿ ಸಂಸ್ಥೆಯ ಕಾರ್ಮಿಕರಿಗೆ ಚಿತಾವಣೆ ಮಾಡಿ ಇನ್ನೊಂದು ಸಂಘವನ್ನು ಪ್ರಾರಂಭಿಸಿದೆವು ಎನ್ನುವುದು ಸುಳ್ಳು. 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕಾರ್ಮಿಕರ Vinyas Innovative Technologies Employees Welfare Association ಎಂಬ ಸಂಘ ಇತ್ತೋ ಅಥವಾ ಇಲ್ಲವೋ ಎಂದು ನನಗೆ ನೆನಪಿಲ್ಲ. ದಿಃ 05.09.2017 ರಂದು ಕಾರ್ಮಿಕ ಇಲಾಖೆಗೆ ಸಲ್ಲಿಸಿದ ತಕರಾರಿನಲ್ಲಿ ಕೆಲವೊಂದು ಕಾರ್ಮಿಕರು ಬೇರೆ ಸಂಘದ ಸದಸ್ಯರು ಎಂದು ನಮೂದಿಸಿದ್ದು ಅದು ಯಾವ ಸಂಘ ಎಂಬ ಪ್ರಶ್ನೆಗೆ ಸಾಕ್ಷಿಯೂ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಈಗ ಸಂಸ್ಥೆಯ ಕಾರ್ಮಿಕರ ಯಾವುದೇ ಸಂಘ ಇರುವುದಿಲ್ಲ.

ದಿಃ05.08.2017 ರಂದು ಸಂಸ್ಥೆಯ ಸುಮಾರು 250 ಕ್ಕೂ ಹೆಚ್ಚು ಕಾರ್ಮಿಕರು ಬೆಂಗಳೂರಿನ ಕಾರ್ಮಿಕ ಆಯುಕ್ತರ ಕಛೇರಿಯ ಮುಂದೆ ಪ್ರತಿಭಟನೆಯನ್ನು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ದಿನದಂದು 250 ಕ್ಕೂ ಹೆಚ್ಚು ಜನ ಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದರೋ ಅಥವಾ ಇಲ್ಲವೋ ಎಂಬುದು ನನಗೆ ನೆನಪಿರುವುದಿಲ್ಲ. ಹಾಜರಾತಿ

ಪುಸ್ತಕವನ್ನು ಪರಿಶೀಲಿಸಿದಲ್ಲಿ ಸದರಿ ಸಂಗತಿಯ ಕುರಿತು ತಿಳಿಯುತ್ತದೆ. ಕಾರ್ಮಿಕರು ಆಯುಕ್ತರಿಗೆ ಸಂಸ್ಥೆಯೂ ಸಂಘವನ್ನು ಬಿಡಲು ಮತ್ತು ಇತರೇ ಕಾರಣಗಳಿಗೆ ಬೇದರಿಕೆ ಹಾಕುತ್ತಿದ್ದಾರೆ ಎಂದು ಸಲ್ಲಿಸಿದ್ದ ಅರ್ಜಿಯ ಕುರಿತು ಡಿ.ಎಲ್.ಸಿ ಕಛೇರಿಯಲ್ಲಿ ನಡೆದ ಸಮಾಲೋಚನಾ ಪ್ರಕ್ರಿಯೆಗಳಿಗೆ ಹಾಜರಾಗಲು ನಮಗೆ ಯಾವುದೇ ನೋಟೀಸ್ ಬಂದಿರುವುದಿಲ್ಲ. 1 ನೇ ಪಕ್ಷಗಾರ ಸಂಘವು ಸಿ.ಓ.ಡಿ ಬೇಡಿಕೆ ಪಟ್ಟಿಯನ್ನು ಸಂಸ್ಥೆಗೆ ಸಲ್ಲಿಸಿದ್ದು, ಅದರ ಕ್ರಮ ಜರುಗಿಸದೇ ಇದ್ದ ಕಾರಣಕ್ಕೆ ಡಿ.ಎಲ್.ಸಿ ಕಛೇರಿಯಲ್ಲಿ ಸಮಾಲೋಚನೆ ನಡೆಯುತ್ತಿದ್ದು, ನಾವು ತಕರಾರು ಸಲ್ಲಿಸಿದ್ದೇವು ಎನ್ನುವುದು ನಿಜ. ಸದರಿ ತಕರಾರಿನಲ್ಲಿ Works committee and Grievance Committee ಕುರಿತು ನಮೂದಿಸಿರಲಿಲ್ಲ ಎನ್ನುವುದಕ್ಕೆ ಸಾಕ್ಷಿಯೂ ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ ಎನ್ನುತ್ತಾರೆ.

2017-18 ನೇ ಸಾಲಿನಲ್ಲಿ ಕಾರ್ಮಿಕರಿಗೆ ಕಲಂ.9-ಎ ಅಡಿ ನೋಟೀಸ್ ನೀಡದೆ ಶನಿವಾರ ದಿನದಂದು ಕೆಲಸಕ್ಕೆ ಬರಬಾರದೆಂದು ತಿಳಿಸುತ್ತಿದ್ದೇವೆ ಎನ್ನುವುದು ಸುಳ್ಳು. ಸಾಕ್ಷಿ ಹೇಳುತ್ತಾರೆ. 5 ವಾರಗಳ ಕಾಲ ಶನಿವಾರ ದಿನದಂದು ವೇತನ ಸಹಿತ ರಜೆ ಎಂದು ಘೋಷಣೆಯನ್ನು ಮಾಡಲಾಗಿತ್ತು. ಉತ್ಪಾದನೆ ಕಡಿಮೆಯಾದ ಕಾರಣಕ್ಕೆ ಸದರಿ ರಜೆಯ Vinyas Innovative Technologies Employees Welfare Association ನ್ನು ಘೋಷಿಸಿತ್ತು. ಸದರಿ ರಜೆಯನ್ನು ಘೋಷಿಸಲು ಕಲಂ.9-ಎ ನೋಟೀಸ್ ನ್ನು ಹೊರಡಿಸಿತ್ತೋ ಅಥವಾ ಇಲ್ಲವೋ ಎಂದು ನನಗೆ ನೆನಪಿಲ್ಲ. ಆ ಸಮಯದಲ್ಲಿ ಕಾರ್ಮಿಕರು ರಜೆ ಘೋಷಣೆಯ ವಿರುದ್ಧ ಪ್ರತಿಭಟನೆಗಳನ್ನು ಮಾಡಿದ್ದರು ಎನ್ನುವುದು ನನಗೆ ನೆನಪಿಲ್ಲ. 2017-18 ನೇ ಸಾಲಿನಲ್ಲಿ ಕಾರ್ಮಿಕರಿಗೆ ವೇತನವನ್ನು ನಿಗದಿತ ದಿನಾಂಕದ ಒಳಗೆ ಪಾವತಿಸುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಆ ಕುರಿತಂತೆ ಕಾರ್ಮಿಕರು ಇಲಾಖೆಗೆ ದೂರನ್ನು ಕೊಟ್ಟಿದ್ದರು ಎನ್ನುವುದು ನನಗೆ ನೆನಪಿಲ್ಲ. ಆ ವಿಚಾರವಾಗಿ ಕಾರ್ಮಿಕ ಇಲಾಖೆಯ

ಅಧಿಕಾರಿಗಳು ಕಾರ್ಖಾನೆಯಲ್ಲಿ ಸಭೆಗಳನ್ನು ನಡೆಸಿದ್ದರು ಎನ್ನುವುದು ಸರಿಯಲ್ಲ. ದಿಃ05.09.2017 ರ ತಕರಾರು ನಿ.ಡಬ್ಲ್ಯೂ6 ರೊಂದಿಗೆ Vinyas Innovative Technologies Employees Welfare Association ನ ಸದಸ್ಯರ ಪಟ್ಟಿಯನ್ನು ಕಾರ್ಮಿಕ ಇಲಾಖೆಗೆ ಸಲ್ಲಿಸಿದ್ದೇವೆ ಎನ್ನುವುದು ನಿಜ. ಸಾಕ್ಷಿ ಹೇಳುತ್ತಾರೆ. ಡಿ.ಎಲ್.ಸಿ ಯವರ ಕೋರಿಕೆ ಮೇರೆಗೆ ಸಲ್ಲಿಸಲಾಗಿತ್ತು.

ಕಾರ್ಮಿಕರು ಮಾಡುತ್ತಿದ್ದ ಪ್ರತಿಭಟನೆಯ ಸಮಯದಲ್ಲಿ ಎ.ಎಲ್.ಸಿ ರವರು ಮಧ್ಯಸ್ಥಿಕೆ ವಹಿಸಿದ್ದರಿಂದ ಸದರಿ ಪ್ರತಿಭಟನೆಗಳನ್ನು ಕಾರ್ಮಿಕರು ಕೈಬಿಟ್ಟಿದ್ದರು ಎನ್ನುವುದು ಸರಿಯಲ್ಲ. ಆದರೇ ಕಾರ್ಮಿಕರೇ ಪ್ರತಿಭಟನೆಗಳನ್ನು ನಿಲ್ಲಿಸಿದ್ದರು. ಯಾವ ಕಾರಣಕ್ಕೆ ಪ್ರತಿಭನಟೆಯನ್ನು ಮಾಡುತ್ತಿದ್ದರು ಎಂದು ನನಗೆ ತಿಳಿದಿತ್ತು. ಸದರಿ ಪ್ರತಿಭಟನೆಗಳನ್ನು ಕೈಬಿಟ್ಟ ನಂತರ ಮೇ ತಿಂಗಳು 2018 ನೇ ಸಾಲಿನಲ್ಲಿ ತಿರುಪತಿಯ ವಿಕೃತ ಮಾಲಾ ಎಂಬ ಸ್ಥಳಕ್ಕೆ ಸುಮಾರು 20 ರಿಂದ 25 ಜನ ಕಾರ್ಮಿಕರನ್ನು ವರ್ಗಾವಣೆ ಮಾಡಿ ಆದೇಶವನ್ನು ಮಾಡಿದ್ದೇವು ಎನ್ನುವುದು ನಿಜ. ಆದರೇ ಪ್ರತಿಭಟನೆಯನ್ನು 2017 ರ ಜನವರಿ ತಿಂಗಳಿನಲ್ಲಿ ಕೈಬಿಟ್ಟದ್ದು, ಆದಾದ 16 ತಿಂಗಳ ನಂತರದಲ್ಲಿ ವರ್ಗಾವಣೆಯನ್ನು ಹೊಸ ಘಟಕವನ್ನು ಸದರಿ ಸ್ಥಳದಲ್ಲಿ ಪ್ರಾರಂಭಿಸಿದ್ದರಿಂದ ಮಾಡಲಾಗಿತ್ತು. ಕಾರ್ಮಿಕರ ಪ್ರತಿಭಟನೆಗಳು 2017 ರ ಜನವರಿ ಯಲ್ಲಿ ಆಗಿರಲಿಲ್ಲ ಎನ್ನುವುದು ಮತ್ತು 2018 ನೇ ಸಾಲಿನಲ್ಲಿ ಆಗಿತ್ತು ಎನ್ನುವುದು ಸರಿಯಲ್ಲ. ಸದರಿ ವರ್ಗಾವಣೆಗೊಂಡ ಕಾರ್ಮಿಕರು 1 ನೇ ಪಕ್ಷಗಾರ ಯೂನಿಯನ್ ಸದಸ್ಯರಾಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ವಿಚಾರವಾಗಿ ಕಾರ್ಮಿಕರು ಇಲಾಖೆಗೆ ದೂರನ್ನು ಸಲ್ಲಿಸಿದ್ದರಿಂದ ಎ.ಎಲ್.ಸಿ ರವರು ನಮಗೆ ನೋಟೀಸ್ ನ್ನು ಕೊಟ್ಟಿದ್ದರು ಎನ್ನುವುದು ಸುಳ್ಳು. ಆ ನಂತರದಲ್ಲಿ ಸುಮಾರು 70 ಜನ ಕಾರ್ಮಿಕರನ್ನು ಸದರಿ ಸ್ಥಳಕ್ಕೆ ವರ್ಗಾವಣೆ ಮಾಡಿದ್ದರು ಎನ್ನುವುದು ನಿಜ. ಅವರಲ್ಲಿ 19 ಜನ ಮಹಿಳಾ ಕಾರ್ಮಿಕರು ಇದ್ದರು ಎನ್ನುವುದು ನಿಜ. ಸದರಿ ವರ್ಗಾವಣೆಗೊಂಡ ಎಲ್ಲಾ ಕಾರ್ಮಿಕರು1 ನೇ ಪಕ್ಷಗಾರ

ಯೂನಿಯನ್ ಸದಸ್ಯರಾಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ. 1 ನೇ ಪಕ್ಷಗಾರ ಸಂಘವು ಸಂಸ್ಥೆಗೆ ಕೊಟ್ಟ ಸದಸ್ಯರ ಪಟ್ಟಿಯಲ್ಲಿ ಸದರಿ ಎಲ್ಲಾ ಕಾರ್ಮಿಕರ ಹೆಸರುಗಳು ಇರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. Vinyas Innovative Technologies Employees Welfare Association ಸದಸ್ಯರುಗಳು ಯಾರು ವರ್ಗಾವಣೆ ಆಗಿರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ.

ತಿರುಪತಿಯ ವಿಕೃತ ಮಾಲಾಗೆ ವರ್ಗಾವಣೆಗೊಂಡ ಕಾರ್ಮಿಕರ ವೇತನವು 2018 ನೇ ಸಾಲಿನಲ್ಲಿ ಎಷ್ಟು ಇತ್ತು ಎಂದು ನನಗೆ ನೆನಪಿಲ್ಲ. ಸದರಿ ವರ್ಗಾವಣೆಗೊಂಡ ಕಾರ್ಮಿಕರ ವಿಚಾರವಾಗಿ ಡಿ.ಎಲ್.ಸಿ ಕಛೇರಿಯಲ್ಲಿ ಸಂಧಾನ ಸಭೆ ನಡೆದಿತ್ತು ಎನ್ನುವುದು ನಿಜ. 1 ನೇ ಪಕ್ಷಗಾರ ಸಂಘದ ಪದಾಧಿಕಾರಿಗಳು, ಆಡಳಿತ ಮಂಡಳಿಯ ಅಧಿಕಾರಿಗಳು, ಕಾನೂನು ಸಲಹೆಗಾರರು ಸೇರಿ ಮೈಸೂರಿನ ಹೋಟೇಲ್ ದಾಸ್ ಪ್ರಕಾಶ್ ಪ್ಯಾರಾಡೈಸ್ ನಲ್ಲಿ 2018 ನೇ ಸಾಲಿನಲ್ಲಿ ಸಭೆಯನ್ನು ನಡೆಸಿದ್ದರು ಎನ್ನುವುದು ನನಗೆ ನೆನಪಿಲ್ಲ. ಸದರಿ ಸಭೆಯಲ್ಲಿ ಸಂಸ್ಥೆಯ ನಿರ್ದೇಶಕರಾದ ಆದ ರಾಘವೇಂದ್ರ ರಾವ್ ರವರು ತಿರುಪತಿಯಲ್ಲಿ ಹೊಸದಾಗಿ ಘಟಕವನ್ನು ಪ್ರಾರಂಭಸಿದ್ದು, ವರ್ಗಾವಣೆಗೊಂಡ ಕಾರ್ಮಿಕರು ಅಲ್ಲಿ ನೇಮಕವಾಗಿದ್ದ ಕಾರ್ಮಿಕರಿಗೆ ಕೆಲವು ದಿನಗಳ ಕಾಲ ತರಬೇತಿಯನ್ನು ನೀಡಿ ಹಿಂದಿರುಗಬೇಕೆಂದು ಹೇಳಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ವಿಚಾರವಾಗಿ ಕಾರ್ಖಾನೆಯ ಒಳಗೂ ಸಹ ಸಭೆ ನಡೆಸಿದ್ದರು ಎನ್ನುವುದು ಸುಳ್ಳು. ಆ ಸಭೆಯಲ್ಲಿ ಸಂಘದ ಕಾನೂನು ಸಲಹೆಗಾರಾದ ಶ್ರೀ.ಮುರಳೀಧರ ಪೇಶ್ವಾ ರವರು ಸಹ ಭಾಗವಹಿಸಿದ್ದರು ಎನ್ನುವುದು ಸುಳ್ಳು. ಸದರಿ ಎಲ್ಲ ಸಭೆಗಳು ನಡೆದಿದ್ದು, ಆ ಸಭೆಗಳಲ್ಲಿ ನಾನು ಭಾಗವಹಿಸಿದ್ದರು ಸಹ ಈಗ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ವರ್ಗಾವಣೆಗೊಂಡ ಕಾರ್ಮಿಕರು ತಮ್ಮ ಕಾನೂನಿನ ರಕ್ಷಣೆಯನ್ನು ಕಾಯ್ದಿಟ್ಟುಕೊಂಡು ನಿಯೋಜನೆಯ (Deputation) ಆಧಾರದಲ್ಲಿ ವರ್ಗಾವಣೆ ಸ್ಥಳಕ್ಕೆ ಕೆಲಸ ಮಾಡಲು

ಹೋಗುತ್ತೇವೆ ಎಂದು ಪತ್ರವನ್ನು ಆಡಳಿತ ಮಂಡಳಿಗೆ ಬರೆದುಕೊಟ್ಟು ಹೋಗಿದ್ದರು ಎನ್ನುವುದು ಸುಳ್ಳು.

ವರ್ಗಾವಣೆಗೊಂಡ ಕಾರ್ಮಿಕರಿಗೆ ಕೆಲಸದ ಅವಧಿಯವರೆಗೂ ತಿರುಪತಿಯ ವಿಕೃತ ಮಾಲಾಗೆ ಹತ್ತಿರದಲ್ಲಿ ಇರುವ D.K. Residency ಎಂಬ ವಸತಿ ಗೃಹದಲ್ಲಿ ವಸತಿ ಸೌಕರ್ಯ ಮಾಡಲಾಗಿದೆ ಎಂದು ತಿಳಿಸಿದ್ದೇವು ಎನ್ನುವುದು ಸುಳ್ಳು. ವರ್ಗಾವಣೆಗೊಂಡ ಕಾರ್ಮಿಕರಿಗೆ ಹೆಚ್ಚುವರಿ ವೇತನವನ್ನು ಕೊಡುತ್ತೇವೆ ಎಂದು ತಿಳಿಸಿರಲಿಲ್ಲ. ದಿಃ10.08.2018 ರಂದು ಸದರಿ ವರ್ಗಾವಣೆಗೊಂಡ ಕಾರ್ಮಿಕರು ಕೆಲಸದ ಸ್ಥಳದಲ್ಲಿ ಕೆಲಸಕ್ಕೆ ವರದಿ ಮಾಡಿಕೊಂಡಿದ್ದರು ಎನ್ನುವುದು ನಿಜ. ಆ ಸಮಯದಲ್ಲಿ ನಾನು ಸಹ ಅಲ್ಲಿ ಇದ್ದೆ. ಆ ಸಮಯದಲ್ಲಿ ಅಲ್ಲಿ ಇದ್ದ ಕಾರ್ಖಾನೆಯಲ್ಲಿ ಯಾವುದೇ ಯಂತ್ರಗಳು ಇರಲಿಲ್ಲ ಎನ್ನುವುದು ಮತ್ತು ವಿದ್ಯುಚ್ಛಕ್ತಿ ಸಂಪರ್ಕ ಸಹ ಕಾರ್ಖಾನೆಗೆ ಇರಲಿಲ್ಲ ಎನ್ನುವುದು ಸುಳ್ಳು. ಆ ಸಮಯದಲ್ಲಿ ಯಾವುದೇ ಉತ್ಪಾದನೆಯ ಕೆಲಸ ಪ್ರಾರಂಭ ಆಗಿರಲಿಲ್ಲ ಎನ್ನುವುದಕ್ಕೆ ಸಾಕ್ಷಿಯೂ ಉತ್ಪಾದನೆಯನ್ನು ಪ್ರಾರಂಭ ಮಾಡುವ ಸಲುವಾಗಿಯೇ ಸದರಿ ಕಾರ್ಮಿಕರನ್ನು ವರ್ಗಾವಣೆ ಮಾಡಲಾಗಿತ್ತು ಎನ್ನುತ್ತಾರೆ. ಸದರಿ ಕಾರ್ಖಾನೆಯನ್ನು ಅಡಮಾನ (Lease) ನಲ್ಲಿ ತೆಗೆದುಕೊಳ್ಳಲಾಗಿತ್ತು. ಕಾರ್ಮಿಕರು ಕೆಲಸಕ್ಕೆ ವರದಿ ಮಾಡಿಕೊಳ್ಳುವುದಕ್ಕಿಂತ ಮೊದಲು ಡಿ.ಎಲ್.ಸಿ ಕಛೇರಿಯಲ್ಲಿ ಉತ್ಪಾದನೆಯೂ ಪ್ರಾರಂಭವಾಗಿದ್ದು, ಸಾಕಷ್ಟು ಗ್ರಾಹಕರಿಂದ ಸರಕುಗಳಿಗೆ ಬೇಡಿಕೆ ಇದೆ ಎಂದು ತಿಳಿಸಿದ್ದೇವು ಎನ್ನುವುದು ನಿಜ. ಸಾಕ್ಷಿ ಹೇಳುತ್ತಾರೆ. ಪೈಲೇಟ್ ಪ್ರೊಡಕಷನ್ ಪ್ರಾರಂಭವಾಗಿದ್ದು, ಗ್ರಾಹಕರು ಸದರಿ ಉತ್ಪಾದನೆಯ ಸರುಕುಗಳನ್ನು approve ಮಾಡಿದ್ದರು ಎನ್ನುತ್ತಾರೆ.

**ನ್ಯಾಯಾಲಯದ ಪ್ರಶ್ನೆಃ** ಪೈಲೇಟ್ ಪ್ರೊಡಕಷನ್ ಅಂದರೆ ಏನು?

**ಉತ್ತರಃ** ಸ್ಯಾಂಪಲ್ ಪ್ರೊಡಕಷನ್ ಗಳನ್ನು ಉತ್ಪಾದಿಸಲಾಗುತ್ತಿದ್ದು, ಅದು ಸರಿಯಾದ ರೀತಿಯಲ್ಲಿ ಉತ್ಪಾದನೆ ಆಗುತ್ತದಯೋ ಅಥವಾ ಇಲ್ಲವೋ ಎಂಬುದನ್ನು ಪರೀಕ್ಷಿಸುವ ಸಲುವಾಗಿ ಮಾಡುವ ಉತ್ಪಾದನೆಯ ಕೆಲಸಕ್ಕೆ ಪೈಲೇಟ್ ಪ್ರೊಡಕಷನ್ ಎನ್ನುತ್ತಾರೆ.

ಕಾರ್ಖಾನೆಯನ್ನು Andhra Pradesh Industrial Infrastructure Corporation Limited ರವರಿಂದ lease ಗೆ ಪಡೆಯಲಾಗಿತ್ತು. ಸದರಿ ಕರಾರನ್ನು ದಿಃ18.04.2018 ರಂದು ಮಾಡಿಕೊಳ್ಳಲಾಗಿತ್ತು. ದಿಃ31.05.2018 ರಂದು ಸದರಿ ಕರಾರು ಆಗಿತ್ತು ಎನ್ನುವುದು ನಿಜ. ಆದರೇ ಅದಕ್ಕೂ ಮೊದಲು ಪ್ರಾರಂಭಿಕ ಕರಾರುಗಳು ಆಗಿದ್ದವು. ಸದರಿ ಕರಾರು ಆಗುವುದಕ್ಕಿಂತ ಮೊದಲೇ ಕಾರ್ಮಿಕರುಗಳನ್ನು ವರ್ಗಾವಣೆ ಮಾಡಲಾಗಿತ್ತು ಎನ್ನುವುದಕ್ಕೆ ಸಾಕ್ಷಿಯೂ ದಿಃ18.04.2018 ರಂದು ಆದ ಪ್ರಾರಂಭಿಕ ಕರಾರಿನ ಆಧಾರದ ಮೇಲೆ ವರ್ಗಾವಣೆಯನ್ನು ಮಾಡಲಾಗಿತ್ತು.

ಸದರಿ Andhra Pradesh Industrial Infrastructure Corporation Limited ಸಂಸ್ಥೆಯೊಂದಿಗೆ ಮಾಡಿಕೊಂಡ ಕರಾರಿನಲ್ಲಿ ಸ್ಥಳಿಯ 500 ಜನ ಕಾರ್ಮಿಕರಿಗೆ ಸದರಿ ಕಾರ್ಖಾನೆಯಲ್ಲಿ ಉದ್ಯೋಗವನ್ನು ಕೊಡುತ್ತೇವೆ ಎಂದು ಒಪ್ಪಂದವನ್ನು ಮಾಡಿಕೊಂಡಿದ್ದೇವು ಎನ್ನುವುದಕ್ಕೆ ಸಾಕ್ಷಿಯೂ 500 ಹೊಸ ಉದ್ಯೋಗವನ್ನು ಸೃಷ್ಟಿಸುತ್ತೇವೆ ಎಂದು ಮಾತ್ರ ಒಪ್ಪಂದ ಮಾಡಿಕೊಂಡು ಸ್ಥಳಿಯ 500 ಜನ ಕಾರ್ಮಿಕರಿಗೆ ಉದ್ಯೋಗ ಕೊಡುತ್ತೇವೆ ಎಂದು ಒಪ್ಪಂದ ಮಾಡಿಕೊಂಡಿರಲಿಲ್ಲ. ದಿಃ10.08.2018 ರಂದು 10 ಜನ ಹೊಸ ಕಾರ್ಮಿಕರುಗಳನ್ನು ನೇಮಿಸಿಕೊಳ್ಳಲಾಗಿತ್ತು. ವರ್ಗಾವಣೆಗೊಂಡು ಹೊದ ಕಾರ್ಮಿಕರಿಗೆ ಸ್ಥಳದಲ್ಲಿ ಯಾವುದೇ ಸರಿಯಾದ ವ್ಯವಸ್ಥೆಗಳನ್ನು ಮಾಡದೇ ಮತ್ತು ಉದ್ಯೋಗವನ್ನು ಕೊಡದೇ ಸಾಕಷ್ಟು ತೊಂದರೆಯನ್ನು ಮಾಡಿದ್ದೇವು ಎನ್ನುವುದು ಸರಿಯಲ್ಲ. ಸದರಿ ಕಾರ್ಮಿಕರು ತಮಗೆ ಶೋಷಣೆಯಾಗುತ್ತದೆ ಎಂಬ ಕಾರಣಕ್ಕೆ ಸ್ಥಳೀಯ ಜಿಲ್ಲಾಧಿಕಾರಿಗೆ ಮತ್ತು ಕಾರ್ಮಿಕ ಇಲಾಖೆಯ

ಅಧಿಕಾರಿಗಳಿಗೆ ಮನವಿಗಳನ್ನು ಕೊಟ್ಟಿದ್ದರು ಎನ್ನುವುದಕ್ಕೆ ಸಾಕ್ಷಿಯೂ ವಸತಿ ಮತ್ತು ಸಾರಿಗೆ ಸೌಕರ್ಯ ಮಾಡಿಕೊಡಲು ಕೇಳಿ ಮನವಿಯನ್ನು ಸಲ್ಲಿಸಿದ್ದರು. ಆದರೇ ಶೋಷಣೆಯ ಕುರಿತಂತೆ ಅಲ್ಲ ಎಂದು ಹೇಳುತ್ತಾರೆ. ಸದರಿ ಮನವಿಯ ಆಧಾರದಲ್ಲಿ ಕಾರ್ಮಿಕ ಇಲಾಖೆಯಿಂದ ಸಮಾಲೋಚನೆಗೆ ನೋಟೀಸ್ ಬಂದಿದ್ದು, ನಾವು ಹಾಜರಾಗಿದ್ದೇವು. ಸದರಿ ಸಮಾಲೋಚನೆಯಲ್ಲಿ ಕಾರ್ಮಿಕರಿಗೆ ಯೋಗ್ಯವಾಗ ವಸತಿ ಸೌಕರ್ಯವನ್ನು ಮಾಡಿಕೊಡುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದೇವು ಎನ್ನುವುದು ಸುಳ್ಳು. ಆ ಕಾರಣಕ್ಕೆ ಸದರಿ  ಕಾರ್ಮಿಕರಿಗೆ 6 ದಿನಗಳ ಕಾಲ ವೇತನ ಸಹಿತಿ ರಜೆಯನ್ನು ಕೊಟ್ಟು ಮೈಸೂರಿಗೆ ಹಿಂದಿರುಗಲು ತಿಳಿಸಿದ್ದರಿಂದ ಕಾರ್ಮಿಕರು ಮೈಸೂರಿಗೆ ಹಿಂದಿರುಗಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಹೇಳುತ್ತಾರೆ. ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕರು ವಸತಿ ಸೌಕರ್ಯವನ್ನು ಮಾಡಿಕೊಳ್ಳದೇ ಕೆಲಸಕ್ಕೆ ಬಂದಿರುವುದರಿಂದ ತಮಗೆ ವಸತಿ ಸೌಕರ್ಯವನ್ನು ಮಾಡಿಕೊಳ್ಳುವ ಸಲುವಾಗಿ ಸಮಯಾವಕಾಶವನ್ನು ಕೋರಿಕೊಂಡಿದ್ದರಿಂದ 6 ದಿನಗಳ ಕಾಲ ವೇತನ ಸಹಿತ ರಜೆಯನ್ನು ಕೊಟ್ಟಿತ್ತು. ಕಾರ್ಮಿಕರು ಜೆ.ಎಲ್.ಸಿ ರವರಲ್ಲಿ ಸಲ್ಲಿಸಿದ ಮನವಿಯಲ್ಲಿ ತಮಗೆ ಯೋಗ್ಯವಾದ ವಸತಿ ಮತ್ತು ಸೌಕರ್ಯಗಳನ್ನು ಆಡಳಿತ ಮಂಡಳಿಯೂ ಮಾಡಿಕೊಡದೇ ಇರುವುದರಿಂದ ಮಧ್ಯ ಪ್ರವೇಶ ಮಾಡಿಬೇಕೆಂದು ಕೋರಿಕೊಂಡಿದ್ದರು ಎನ್ನುವುದು ನಿಜ. 6 ದಿನಗಳ ವೇತನ ಸಹಿತಿ ರಜೆಯ ನಂತರ ಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದು, ಅವರಿಗೆ ನಾವು ಉದ್ಯೋಗವನ್ನು ಮತ್ತು ವಸತಿ ಸೌಕರ್ಯವನ್ನು ಕೊಟ್ಟಿರಲಿಲ್ಲ ಎನ್ನುವುದು ಸರಿಯಲ್ಲ. 6 ದಿನಗಳ ವೇತನ  ಸಹಿತ ರಜೆಯ ಸಮಯದಲ್ಲಿ ಕಾರ್ಮಿಕರೊಂದಿಗೆ ನನ್ನ ಸಹೋದ್ಯೋಗಿ ಸುಧಾಕರ್ ಎನ್ನುವವರು ಕಾರ್ಮಿಕರಿಗೆ ವಸತಿ ಸೌಕರ್ಯ ಮಾಡಿಕೊಡಲು ಸ್ಥಳಗಳನ್ನು ಪರಿಶೀಲಿಸಿದ್ದರು ಎನ್ನುವುದು ನಿಜ. ಸಾಕ್ಷಿ ಹೇಳುತ್ತಾರೆ. ಕಾರ್ಮಿಕರಿಗೆ ಸಹಾಯ ಮಾಡಲು ಅವರ ಕೋರಿಕೆಯ ಮೇರೆಗೆ  ವಸತಿ ಗೃಹಗಳನ್ನು ಹೂಡಕಲು ಪ್ರಯತ್ನಿಸಿದ್ದರು. ಸದರಿ  6 ದಿನಗಳ ಅವಧಿಯ ನಂತರ ಕಾರ್ಮಿಕರು

ಕೆಲಸಕ್ಕೆ ಹಾಜರಾಗಲು ಹೋಗುವ ಸಮಯದಲ್ಲಿ ಮೈಸೂರಿನ ಕಾರ್ಮಿಕ ಪ್ರತಿನಿಧಿಗಳು ನನಗೆ ಫೋನ್ ಮೂಲಕ ಕಾರ್ಮಿಕರಿಗೆ ಎಲ್ಲ ಸೌಲಭ್ಯಗಳನ್ನು ಮಾಡಿಕೊಡುವಂತೆ ಕೇಳಿಕೊಂಡಿದ್ದರು ಎನ್ನುವುದು ಸುಳ್ಳು. ಕಾರ್ಮಿಕರು ಕೆಲಸಕ್ಕೆ ಹಾಜರಾದ ಸಮಯದಲ್ಲಿ ಅವರಿಗೆ ಆಹಾರ, ವಸತಿ ಮತ್ತು ಉದ್ಯೋಗದ ವ್ಯವಸ್ಥೆಯನ್ನು ಮಾಡಿರಲಿಲ್ಲ ಎನ್ನುವುದು ಸುಳ್ಳು. ಆ ಸಮಯದಲ್ಲಿ 15 ಜನ ಮಹಿಳಾ ಕಾರ್ಮಿಕರು ಹಾಜರಾಗಿದ್ದರು ಎನ್ನುವುದು ಸುಳ್ಳು. ಎಷ್ಟು ಜನ ಮಹಿಳಾ ಕಾರ್ಮಿಕರು ಹಾಜರಾಗಿದ್ದರು ಎಂದು ಹಾಜರಾತಿ ಪುಸ್ತಕವನ್ನು ನೋಡಿ ಹೇಳುತ್ತೇನೆ. ಕಾರ್ಖಾನೆಯ ಸ್ಥಳದಲ್ಲಿ ಮೂಲಭೂತ ಸೌಕರ್ಯಗಳನ್ನು ಮತ್ತು ಪ್ರತ್ಯೇಕ ಶೌಚಾಲಯಗಳ ವ್ಯವಸ್ಥೆಯನ್ನು ಮಾಡಿರಲಿಲ್ಲ ಎನ್ನುವುದು ಸರಿಯಲ್ಲ. ನಗರದಿಂದ ಕಾರ್ಖಾನೆಯೂ ಸುಮಾರು 20 ಕೀ.ಮೀ ದೂರದಲ್ಲಿ ಇತ್ತು ಎನ್ನುವುದು ಸರಿಯಲ್ಲ. ಆದರೇ 10 ಕೀ.ಮೀ. ದೂರದಲ್ಲಿ ಇತ್ತು.

ಈ ಸಮಯದಲ್ಲಿ ಶ್ರೀ. ಎಲ್.ಎಂ.ಪಿ ಅವರು ಸಾಕ್ಷಿಯ ಮುಂದಿನ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಆಲಿಸಿ ಮುಂದುಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

Sd/-

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**